No KRNN 12

24-2-75

in ★ ★ ★ ★ ★

58 th Year
ನೇ ವರ್ಷ

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸತ್ಯವಾದಿ
SATYAVADI

Golden Jubilee Celebrated Paper
Satyavadi Daily
Mysore 4
– For Influential Publicity –

ಸ್ವಾಮಿ ಪತ್ರಿಕರು: ಅರಮನೆ ಸರಸ್ವತಿಪುರಂ ಎಂ. ವಿ. ಸುಬ್ಬಯ್ಯ ಸಂಪಾದಕರು ಧರ್ಮಸ್ವಾಮಿಗಳವರಿಂದ ಎಂ. ಎಸ್. ಕೃಷ್ಣರಾವ್ [8 ಪುಟ

ಅಕಿ ಗಿರಣಿಗಳಿಗೆ ಖೋತಾದಿಂದ ವಿನಾಯಿತಿ

ಹಾವುಗಳೊಡನೆ ಸರಸ – ವಿಚಿತ್ರ ಹವ್ಯಾಸ

ಹಾವುಗಳು ನಿರಪಾಯಕಾರಿ, ಮನುಷ್ಯರನ್ನು ಕಂಡರೆ ಅವುಗಳಿಗೆ ಅಂಜಿಕೆ, ತಮ್ಮನ್ನು ಕೆಣಕಿದಾಗ ಮಾತ್ರ ಅವು ಆತ್ಮರಕ್ಷಣೆಗಾಗಿ ಮಾನವನ ಮೇಲೆ ದಾಳಿ ಮಾಡುತ್ತವೆ ; ಹಾವುಗಳಿಗೂ ಜೀವಿಸುವ ಹಕ್ಕಿದೆ; ನಮ್ಮ ಭಯ ಮತ್ತು ಅಜ್ಞಾನ ಕ್ಕಾಗಿ ಅವುಗಳನ್ನು ಏಕೆ ನಾಶಮಾಡಬೇಕು ? ಎಂಬ ಅಭಿಪ್ರಾಯವುಳ್ಳ, ಮದ್ರಾಸಿನ ಟೆಲಿಪ್ರಿಂಟರು ಕಾರ್ಖಾನೆಯ ಸಂರಕ್ಷಣಾಧಿಕಾರಿ ದಾನ ಬ್ಲ್ಯಾಂಕಲೆ ಪ್ರತಿದಿನ ಸಂಜೆ ಹೆಬ್ಬಾವಿನೊಡನೆ ಗಾಳಿಸೇವನೆಗೆ ಹೋಗುತ್ತಾರೆ.

ತಂದೆ ದಾನ್ ಬ್ಲ್ಯಾಂಕಲಿ ಹಾವುಗಳ ಸ್ನೇಹಿತನಾದರೆ ಮಕ್ಕಳಿಗೂ ಅವುಗಳ ಸ್ನೇಹ ಬೇಕು. ಅವರ 3 ವರ್ಷದ ಮತ್ತು 2 ವರ್ಷದ ಗಂಡುಮಕ್ಕಳು, ತಂದೆ ಮನೆಗೆ ಬಂದಾಗ, ಅಪ್ಪಾಜಿ ಹಾವು ತಂದಿರಾ ಎಂದು ಕೇಳುತ್ತವೆ; ಮಕ್ಕಳು ಹಾವುಗಳಿಗಾಗಿ ತಂದೆಯು ಸರ್ಪನ ಜೇಬುಗಳನ್ನು ಹುಡುಕುತ್ತವೆ. ದಾನ್‌ರವರ ಮಕ್ಕಳು ಹಾವಿನ ಮರಿಗಳೊಂದಿಗೆ ಚಲ್ಲಾಟವಾಡುತ್ತವೆ. ಮಕ್ಕಳು ವಿಷದ ಹಾವುಗಳನ್ನು ಹಿಡಿದಾಗಲೆಲ್ಲಾ ' ಭಗವಂತ ನಮ್ಮ ಮಕ್ಕಳನ್ನು ಕಾಪಾಡು " ಎಂದು ದಾನ್ ದಂಪತಿಗಳು ಬೇಡಿಕೊಳ್ಳುತ್ತಾರೆ

ನೌಕಾದಳದಲ್ಲಿ ಸೇವೆ ಪೂರೈಸಿ ಇಲ್ಲಿಗೆ ಬರುವ ಬರುವ ಮುಂಚೆ 1958 ರಲ್ಲಿ ಐ ಎಂ ಎಸ್ ಶಿವಾಜಿ ನೌಕಾದಲ್ಲಿ ತರಬೇತು ಪಡೆಯುತ್ತಿದ್ದಾಗ, ಗುಬ್ಬಚ್ಚಿ ಗೂಡಿನಲ್ಲಿದ್ದ ಹಾವನ್ನು ಇವರು ತೆಗೆದಾಗ ಇವರಿಗೂ ಹಾವಿಗೂ ಸ್ನೇಹ ಆರಂಭವಾಯ್ತು

ಇವರು ರೋಮುಲಾನ್ ವಿಟೇಕರ್ ಹಾಗೂ ಅವರ ಸರ್ಪವನದ ಬಗ್ಗೆ ಓದಿದರು ; ದಿನವೂ ಮದ್ರಾಸಿನಲ್ಲಿ ಸರ್ಪವನಕ್ಕೆ ಹೋಗಿಬರುತ್ತಿದ್ದು ಅಲ್ಲಿ, ಹಾವುಗಳ ಜಾತಿಗಳು, ವೈಶಿಷ್ಟ್ಯಗಳನ್ನು ಗುರ್ತಿಸಲು ಅಭ್ಯಾಸ ಮಾಡಿದರು ನಂತರ ಸರ್ಪವನಕ್ಕೆ ಕೊಡಲು ಹಾವುಗಳನ್ನು ಹಿಡಿಯಲು ಪ್ರಾರಂಭಿಸಿದರು ; ಅವರು ಹಿಡಿದಿರುವ ಹಾವುಗಳಲ್ಲಿ ಅನೇಕ ಭಾರಿ ವಿಷಸರ್ಪಗಳೂ ಸೇರಿವೆ.

ವುಡ್‌ಲಾಂಡ್ 21 2 75 ರಿಂದ

ಅಮೋಘ ಆರಂಭ

ಕನ್ನಾಕುಮಾರಿ

ಅಪೆರಾ 21 2 75 ರಿಂದ

ಬಾಳುಬೆಳಗಿತು

ಸರಿಯಲ್ಲ

ಕಾಂಗ್ರೆಸ್ ಪಕ್ಷದ ಶ್ರೀ ಎಲ್ ಟಿ ಕಾಲೇರಿಯವರು ವಿಧಾನ ಪರಿಷತ್ತಿನಲ್ಲಿ ಮಾತನಾಡುತ್ತಾ, ಅವಶ್ಯವಾಗಿರುವ ಅಭಿವೃದ್ಧಿ ಕಾರ್ಯಗಳಿಗೆ ಹಣ ಇಲ್ಲದಿರುವಾಗ ಚಲನಚಿತ್ರ ಅಭಿವೃದ್ಧಿ ನಿಂಡಲಿಗೆ ಸರ್ಕಾರ ಹತ್ತು ಲಕ್ಷ ರೂ ಏಕೆ ಕೊಡಬೇಕು ಎಂದರು.

★

ಯುವಕನ ಮರಣ

ಗೆಳೆಯರೊಡನೆ ವಿಹಾರಾರ್ಥವಾಗಿ ತೆರಳಿದ್ದ ಶಾಮಚಂದನ್ ಎಂಬ 20 ವರ್ಷದ ಯುವಕನು ಕಾಲು ಜಾರಿ ಕಾವೇರಿ ನದಿಯಲ್ಲಿ ಬಿದ್ದು ಮರಣಹೊಂದಿದನೆಂದು ವರದಿಯಾಗಿದೆ ಈ ಘಟನೆ ಬಲಮುರಿಯಲ್ಲಿ ನಡೆಯಿತು.

●

ಆಹಾರ ಪಡಿತರ

ರಾಜ್ಯ ವಿಧಾನ ಸಭೆಯಲ್ಲಿ ಶ್ರೀಮತಿ ಇವಾ ವಾಜ್‌ರವರು ಮಾತನಾಡುತ್ತಾ, ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷಕ್ಕಾ ಹೆಚ್ಚಾಗಿ ಜನರು ಇರುವ ಪಟ್ಟಣಗಳಲ್ಲಿ ಆಹಾರ ಪಡಿತರ ಜಾರಿಗೆ ತರುವದಾಗಿ ತಿಳಿಸಿದರು.

★

ಮಂತ್ರಿಗಳ ಪ್ರವಾಸ

ಮಂತ್ರಿ ಶ್ರೀ ಎನ್. ರಾಚಯ್ಯನವರು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿದರು.

★

ಸಮಿತಿಗೆ ಮನವಿ

ಯು ಜಿ ಸಿ ಸಮಿತಿಗೆ ತಮ್ಮ ಕುಂದು ಕೊರತೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಕೇತರ ನಿಬ್ಬಂದಿ ವರ್ಗದವರು ಮೈಸೂರಿನಲ್ಲಿ [illegible]

ದಂಡನೆ

ಬೆಂಗಳೂರು ಹೊಸ ತರಗುಪೇಟೆ ವರ್ತಕ ರಾಧಾಕೃಷ್ಣಶೆಟ್ಟಿ ಎಂಬವರಿಗೆ ಬೆಂಗಳೂರಿನ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಮೂರು ತಿಂಗಳು ಕಠಿಣ ಸಜೆ ಹಾಗೂ 1 ಸಾವಿರ ರೂ ದಂಡ ವಿಧಿಸಿದರು. ಅವರು ಸುಮಾರು 35 ಸಾವಿರ ರೂಪಾಯಿಗಳ ಅಕ್ಕಿ ಹಾಗೂ ಜೋಳ ಅಕ್ರಮ ದಾಸ್ತಾನು ಇಟ್ಟಿದ್ದರೆಂದು ಆಪಾದಿಸಲಾಗಿದೆ

ಗುರುಪಾದಸ್ವಾಮಿಗಳ ಕರೆ

ಸಂಸ್ಥಾ ಕಾಂಗ್ರೆಸಿನ ನಾಯಕರಾದ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಮಾತನಾಡುತ್ತಾ, ಭ್ರಷ್ಟಾಚಾರಿಗಳನ್ನು ರಾಜ್ಯ ಮಂತ್ರಿಮಂಡಲದಿಂದ ಹೊರದೂಡಲು ವಿರೋಧ ಪಕ್ಷಗಳು ಒಂದು ಜನತಾ ಕಾರ್ಯಕ್ರಮ ರೂಪಿಸಬೇಕು ಎಂದರು

ವಿದ್ಯಾರ್ಥಿಯ ಮರಣ

ವೈದ್ಯಕೀಯ ಕಾಲೇಜು ವಿದ್ಯಾರ್ಥಿ ಬೆಂಗಳೂರಿನ ಶಾಮಸುಂದರ ಎಂಬಾತನಿಗೆ ಲಾರಿಯೊಂದು ಹರಿದ ಪರಿಣಾಮವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಮರಣಪಟ್ಟನು ಈ ದುರ್ಘಟನೆ ನಡೆದುದು ಮೈಸೂರು ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಪಶು ವೈದ್ಯಕಾಲೆ ಮುಂದೆ.

ಆಶ್ವಾಸನೆ

ರಾಜ್ಯದ ವಿದ್ಯುತ್ ಮಂತ್ರಿ ಶ್ರೀ ಹೆಚ್ ಸಿ ಶ್ರೀಕಂಠಯ್ಯನವರು ಬೆಂಗಳೂರಿನಲ್ಲಿ ಮಾತನಾಡುತ್ತಾ, ವಿದ್ಯುತ್ ಖೋತಾದಿಂದ ರಾಜ್ಯದಲ್ಲಿರುವ ಅಕ್ಕಿ ಗಿರಣಿಗಳಿಗೆ ವಿನಾಯಿತಿ ಕೊಡುವದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದರು.

ಭೀಕರ ಕೊಲೆ

ರಂಗಯ್ಯ ಎಂಬವರ ಮಗ ಗೋವಿಂದ ಎಂಬಾತನನ್ನು ಪಿರಿಯಾಪಟ್ಟಣ ತಾಲ್ಲೂಕು ಆಯಿರವೇಲು ದೊಡ್ಡಹಾವೆ ಕಾಡಿನಲ್ಲಿ ತಲೆಯನ್ನು ಕತ್ತರಿಸಿ ಕೊಲೆ ಮಾಡಿರುವಂತಾಗಿ ವರದಿಯಾಗಿದೆ. ಅಲ್ಲಿ ಮೃತನ ಮುಂಡ ಮಾತ್ರ ದೊರೆತಿದೆ.

ಸೋವಿಯತ್ ಸರ್ಕಾರ ವಿಶೇಷಜ್ಞರುಗಳಿಗೆ ನೀಡುವ ಸವಲತ್ತುಗಳು

ಸೋವಿಯತ್ ಒಕ್ಕೂಟದಲ್ಲಿ ಸರ್ಕಾರವು ಯುವ ವಿಶೇಷಜ್ಞರುಗಳಿಗೆ ಅನೇಕ ವಿಶೇಷ ಸವಲತ್ತುಗಳನ್ನು ನೀಡುತ್ತದೆ. ಕಾಲೇಜಿನಿಂದ ಪದವೀಧರನಾಗುವ ಪ್ರತಿಯೊಬ್ಬನಿಗೂ, ಅವನ ಸಮ್ಮತಿಯ ಮೇರೆಗೆ ಅವನ ವಿಶೇಷತೆಯಲ್ಲಿ ಕೆಲಸವನ್ನು ಪಡೆಯುವ ಹಕ್ಕು ಪಡೆದಿರುತ್ತಾನೆ. ಅವನು ಕೆಲಸಕ್ಕೆ ದಾಖಲಾಗುವ ಮುನ್ನ ಸಂಬಳ ಸಮೇತ ಒಂದು ದಿನ ರಜೆ ಪಡೆಯುವ, ತನ್ನ ಭಾವಿ ನೌಕರಿಯ ಸಂಸ್ಥೆಯಿಂದ ತನ್ನ ಅಧ್ಯಯನ ಸ್ಥಳದಿಂದ ಕೆಲಸದ ಸ್ಥಳಕ್ಕೆ ಹೋಗಲು ತನ್ನ ಮತ್ತು ತನ್ನ ಕುಟುಂಬದ ಪ್ರಯಾಣದ ಖರ್ಚನ್ನು ಪಡೆಯುವ

ತನ್ನ ಮತ್ತು ತನ್ನ ಕುಟುಂಬಕ್ಕೆ ಯಾವೊಂದು ವಿಳಂಬ ಇಲ್ಲದೆ ಅವಶ್ಯಕವಾದ ವಾಸಸ್ಥಳಗಳನ್ನು ಪಡೆಯುವ.

ಅವನ ನೌಕರಿ ಕಾಗದ ಪತ್ರಗಳಲ್ಲಿ ಬರೆಯಲಾಗಿರುವ ಯಾವೊಂದು ಪಕ್ಷಪಾತಗಳಿಗೂ ಅಡಚಣೆಗೂ ವರ್ಗವು ಈಡೇರಿಸದೇ ಹೋದರೆ, ಯಾವುದೇ ಇತರ ಉದ್ಯಮದಲ್ಲಿ, ಇಲ್ಲವೇ ಯಾವುದಾದರೂ ಇತರ ಸಂಘಟನೆಯಲ್ಲಿ ಕೆಲಸವನ್ನು ಕೇಳುವ ಹಕ್ಕು ಹೊಂದಿರುತ್ತಾನೆ.

ಕಾಲೇಜು ಶಿಕ್ಷಣ ಮುಗಿದ ನಂತರ ಮೂರು ವರ್ಷಗಳ ಕಡ್ಡಾಯ-ಕೆಲಸ ಪೂರ್ಣಗೊಳಿಸಿದಾಗ, ವಿಶೇಷಜ್ಞನು ಬಯಸಿದರೆ ಬೇರೆ ಉದ್ಯಮದಲ್ಲಿ ಕೆಲಸವನ್ನು ಪಡೆಯಬಹುದಾಗಿದೆ

ಯುವ ವಿಶೇಷಜ್ಞರುಗಳು ತಮ್ಮ ಕೆಲಸದ ಸ್ಥಳದಲ್ಲಿ ಕೆಲಸಗಾರರು ಮತ್ತು ಆಫೀಸು ನೌಕರರು ಪಡೆಯುತ್ತಿರುವ ಎಲ್ಲ ವಿಶೇಷ ಸವಲತ್ತುಗಳನ್ನು ಪಡೆಯುವರು

Remember

You are quite safe in your dealings with

Bank Road Bahusar

Firm Noted for Genuine Good Business

Silver Jubilee of Gorakshana

When Journals devoted to the pious and noble cause of cow-protection, kindness to animals, ahimsa, etc, are very few and dharmic papres are short-lived, it is rejoicing that the 'Gorakshana' will be celebrating its uniqe Silver jubilee early and in a befitting manner. Donations and Messages from philanthropic, Gomata-interested humanitarian persons are fervently solicited, and this act of kindness will be gratefully acknowledged and ever remembered.

Editor 'Gorakshana" Chamarajapuam, Mysore 4

SHAKTI SUDHA

A Superb Tonic

Contribute Liberally to the National Defence Fund

Quality Printing Neat Binding

Lakshminarasimha Press

Mysore 1

Protect the Cow

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ



Help The Gorakshana

—Humanitarian Propoganda Monthly

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore